# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| **ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ** | **:** | **762** |
| **ಸದಸ್ಯರ ಹೆಸರು** | **:** | **ಶ್ರೀ ಶಾಂತರಾಮ ಬುಡ್ನ ಸಿದ್ದಿ (ನಾಮನಿರ್ದೇಶನ ಹೊಂದಿದವರು)** |
| **ಉತ್ತರಿಸಬೇಕಾದ ದಿನಾಂಕ** | **:** | **18.08.2025** |
| **ಉತ್ತರಿಸುವ ಸಚಿವರು** | **:** | **ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವರು** |

| ಕ್ರ ಸಂ | ಪ್ರಶ್ನೆ | ಉತ್ತರ |
|---|---|---|
| ಅ | ಉತ್ತರ ಕನ್ನಡ ಜಿಲ್ಲೆಯಲ್ಲಿನ ಬಹಳಷ್ಟು ಶಾಲೆಗಳಿಗೆ ಮೂಲಭೂತ ಸೌಕರ್ಯಗಳಾದ ಕುಡಿಯುವ ನೀರು, ಶಾಲಾ ಕೊಠಡಿಗಳು, ಶೌಚಾಲಯದ ಕೊರತೆ ಮುಂತಾದ ಸಮಸ್ಯೆಗಳಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಸರ್ಕಾರ ತೆಗೆದುಕೊಂಡ ಕ್ರಮಗಳೇನು; | ಉತ್ತರ ಕನ್ನಡ ಶೈಕ್ಷಣಿಕ ಜಿಲ್ಲೆಯಲ್ಲಿ ಕುಡಿಯುವ ನೀರಿನ ಸಮಸ್ಯೆ ಮತ್ತು ಶೌಚಾಲಯ ಕೊರತೆ ಇರುವುದಿಲ್ಲ.<br>ಕೊಠಡಿಗಳ ಕೊರತೆಯ ಸಮಸ್ಯೆಯ ಪರಿಹಾರಕ್ಕೆ ಸರ್ಕಾರದಿಂದ 105 ಶಾಲೆಗಳಲ್ಲಿ 127 ಕೊಠಡಿಗಳ ನಿರ್ಮಾಣಕ್ಕೆ ಅನುದಾನ ಮಂಜೂರಾಗಿದ್ದು, ಅದರಲ್ಲಿ 126 ಕೊಠಡಿಗಳ ಕಾಮಗಾರಿ ಮುಕ್ತಾಯವಾಗಿದ್ದು 01 ಕೊಠಡಿ ಕಾಮಗಾರಿ ಮುಕ್ತಾಯದ ಹಂತದಲ್ಲಿದೆ.<br>**(ವಿವರ ಅನುಬಂಧ-1ರಲ್ಲಿ ಲಗತ್ತಿಸಿದೆ )**<br><br>ಸರ್ಕಾರಿ ಶಾಲೆಗಳಲ್ಲಿ ಕಟ್ಟಡಗಳ ಕಾಮಗಾರಿಗಳಿಗೆ ಹಾಗೂ ಕೊಠಡಿ ದುರಸ್ತಿ ಕಾಮಗಾರಿಗಳಿಗೆ ಪ್ರತಿ ವರ್ಷ ಕ್ರಿಯಾ ಯೋಜನೆ ಸಿದ್ದಪಡಿಸಿ ಅನುದಾನ ಒದಗಿಸಲಾಗುತ್ತಿದ್ದು, 2025-26ನೇ ಸಾಲಿನಲ್ಲಿ ಅನುದಾನದ ಲಭ್ಯತೆಯನ್ನಾಧರಿಸಿ ಹಂತ ಹಂತವಾಗಿ ಶಿಥಿಲಾವಸ್ಥೆಯಲ್ಲಿರುವ ಶಾಲಾ ಕೊಠಡಿಗಳ ನಿರ್ಮಾಣ ಹಾಗೂ ದುರಸ್ತಿ ಕಾರ್ಯಗಳನ್ನು ಹಮ್ಮಿಕೊಳ್ಳಲು ಕ್ರಮವಹಿಸಲಾಗುವುದು.<br><br>**ಸಮಗ್ರ ಶಿಕ್ಷಣ ಕರ್ನಾಟಕ:-**<br>ಪಿ.ಎಂ.ಶ್ರೀ ಯೋಜನೆಯಲ್ಲಿ 2023-24 ರ ಸಾಲಿಗೆ ಉತ್ತರ ಕನ್ನಡ ಜಿಲ್ಲೆಯಲ್ಲಿನ 02 ಶಾಲೆಗಳಿಗೆ ಕುಡಿಯುವ ನೀರಿನ ಸೌಲಭ್ಯ ಒದಗಿಸಲು ರೂ.4.00 ಲಕ್ಷಗಳ ಅನುದಾನ ಮಂಜೂರಾಗಿ ಬಿಡುಗಡೆಯಾಗಿರುತ್ತದೆ, ಕಾಮಗಾರಿಗಳು ಮುಕ್ತಾಯಗೊಂಡು ಉಪಯೋಗಿಸಲ್ಪಡುತ್ತಿದೆ.<br><br>2024-25 ರ ಸಾಲಿನಲ್ಲಿ 06 ಕೊಠಡಿಗಳ ನಿರ್ಮಾಣಕ್ಕಾಗಿ ರೂ.117.40 ಲಕ್ಷಗಳ ಅನುದಾನ ಮಂಜೂರಾಗಿದ್ದು, ರೂ.88.06 ಲಕ್ಷಗಳ ಅನುದಾನ ಬಿಡುಗಡೆಯಾಗಿ ಕಾಮಗಾರಿಗಳು ಪ್ರಗತಿಯಲ್ಲಿದೆ.<br>ಕೇಂದ್ರ ಪುರಸ್ಕೃತ ಯೋಜನೆಯಾದ ಸಮಗ್ರ ಶಿಕ್ಷಣ-ಕರ್ನಾಟಕ ಯೋಜನೆಯಡಿ ಪ್ರಾಥಮಿಕ ಮತ್ತು ಪ್ರೌಢ ಶಾಲೆಗಳಲ್ಲಿ ವ್ಯಾಸಂಗ ಮಾಡುವ ಮಕ್ಕಳ ಹಾಜರಾತಿಗೆ ಅನುಗುಣವಾಗಿ ಹಾಗೂ ಅವಶ್ಯವಿರುವ ಕೊಠಡಿಗಳ ಬಗ್ಗೆ ಸಂಬಂಧಪಟ್ಟ ಜಿಲ್ಲೆಗಳಿಂದ ಬರುವ ಪ್ರಸ್ತಾವನೆಗಳನ್ನು ಆಧರಿಸಿ ಮಂಜೂರಾದ/ ಅನುಮೋದನೆಯಾದ ಕಾಮಗಾರಿಗಳಿಗೆ ಆಯಾ |

<table>
<tr><td></td><td></td><td>ಸಾಲಿನಲ್ಲಿ ಬಿಡುಗಡೆ ಆಗುವ ಅನುದಾನಕ್ಕೆ ಅನುಗುಣವಾಗಿ ಕೊಠಡಿಗಳನ್ನು ನಿರ್ಮಿಸಿ ಕೊರತೆಯನ್ನು ನೀಗಿಸಲು ಕ್ರಮ ವಹಿಸಲಾಗುವುದು.</td></tr>
<tr><td>ಆ</td><td>ಮಲೆನಾಡು ಜಿಲ್ಲೆಗಳಲ್ಲಿ ನಿರಂತರ ಮಳೆಯಿಂದ ಜಿಲ್ಲೆಯ ಅನೇಕ ಶಾಲೆಗಳ ಮೇಲ್ಛಾವಣಿ ಸೋರುವಿಕೆ ದುರಸ್ಥಿ ಆಗಬೇಕಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಕಳೆದ 02 ವರ್ಷದಲ್ಲಿ ಉತ್ತರ ಕನ್ನಡ ಜಿಲ್ಲೆಯಲ್ಲಿ ಎಷ್ಟು ಶಾಲೆಗಳ ಮೇಲ್ಛಾವಣಿ ದುರಸ್ಥಿ ಕಾರ್ಯ ಕೈಗೊಳ್ಳಲಾಗಿದೆ ಮತ್ತು ಎಷ್ಟು ಶಾಲೆಗಳ ಮೇಲ್ಛಾವಣಿ ದುರಸ್ಥಿ ಕಾರ್ಯ ಆಗಬೇಕಾಗಿದೆ; (ತಾಲ್ಲೂಕುವಾರು ಮಾಹಿತಿ ನೀಡುವುದು)</td><td>
<ul>
<li>2023-24 ನೇ ಸಾಲಿನಲ್ಲಿ ರಾಜ್ಯ ವಲಯ ಯೋಜನೆಯಡಿ ಕೊಠಡಿ ದುರಸ್ಥಿಗೆ ಮಂಜೂರಾದ ಅನುದಾನ ವಿವರದ ಅನುಬಂಧ 'ಅ' ಲಗತ್ತಿಸಿದೆ.</li>
<li>2023-24 ಹಾಗೂ 2024-25 ನೇ ಸಾಲಿನಲ್ಲಿ ಪ್ರಕೃತಿ ವಿಕೋಪದಡಿ ಕೊಠಡಿ ದುರಸ್ಥಿಗೆ ಮಂಜೂರಾದ ಅನುದಾನ ವಿವರದ ಅನುಬಂಧ 'ಅ' ಲಗತ್ತಿಸಿದೆ.</li>
<li>2025-26 ನೇ ಸಾಲಿನಲ್ಲಿ ಮೇಲ್ಛಾವಣಿ ದುರಸ್ಥಿ ಕಾರ್ಯ ಆಗಬೇಕಾದ ತಾಲ್ಲೂಕುವಾರು ಶಾಲೆಗಳ,ಕೊಠಡಿಗಳ ಸಂಖ್ಯೆ ಹಾಗೂ ಅಂದಾಜು ಮೊತ್ತದ ವಿವರ</li>
</ul>
<table>
<tr><th>ಕ್ರ ಸಂ</th><th>ತಾಲೂಕಿನ ಹೆಸರು</th><th>ಶಾಲೆಗಳ ಸಂಖ್ಯೆ</th><th>ಕೊಠಡಿ ಗಳ ಸಂಖ್ಯೆ</th><th>ಅಂದಾಜು ಮೊತ್ತ (ಲಕ್ಷಗಳಲ್ಲಿ)</th></tr>
<tr><td>1</td><td>ಕಾರವಾರ</td><td>13</td><td>13</td><td>29.50</td></tr>
<tr><td>2</td><td>ಅಂಕೋಲಾ</td><td>17</td><td>17</td><td>33.25</td></tr>
<tr><td>3</td><td>ಕುಮಟಾ</td><td>23</td><td>23</td><td>37.65</td></tr>
<tr><td>4</td><td>ಹೊನ್ನಾವರ</td><td>20</td><td>20</td><td>38.10</td></tr>
<tr><td>5</td><td>ಭಟ್ಕಳ</td><td>29</td><td>29</td><td>47.80</td></tr>
<tr><td></td><td>ಒಟ್ಟು</td><td>102</td><td>102</td><td>186.30</td></tr>
</table>
<ul>
<li>ಈ 102 ಶಾಲೆಗಳಲ್ಲಿ ಶಿಥಿಲಾವಸ್ಥೆಯಲ್ಲಿರುವ ಕೊಠಡಿ ಹೊರತುಪಡಿಸಿ ಹೆಚ್ಚುವರಿ ಶಾಲಾ ಕೊಠಡಿಗಳು ಸುವ್ಯವಸ್ಥೆಯಲ್ಲಿದ್ದು, ಮಕ್ಕಳ ಪಾಠ ಪ್ರವಚನಗಳಿಗೆ ಯಾವುದೇ ತೊಂದರೆ ಇರುವುದಿಲ್ಲ.</li>
<li>ಈ 102 ಕೊಠಡಿಗಳನ್ನು ಅನುದಾನ ಲಭ್ಯತೆ ಆಧಾರದಲ್ಲಿ ರಾಜ್ಯವಲಯ ಯೋಜನೆಯಡಿ ಮತ್ತು ಎಸ್ ಡಿ ಆರ್ ಎಫ್ / ಎನ್ ಡಿ ಆರ್ ಎಫ್ ಯೋಜನೆಯಡಿ ದುರಸ್ತಿಗೆ ಕ್ರಮ ಕೈಗೊಳ್ಳಲು ಕ್ರಮವಹಿಸಲಾಗಿದೆ.</li>
</ul>
</td></tr>
<tr><td>ಇ</td><td>ಬೆಳಗಾವಿ ಜಿಲ್ಲೆ ಖಾನಾಪೂರ ತಾಲ್ಲೂಕಿನ ನಾಗರಗಾಳಿ ಗ್ರಾಮ ಪಂಚಾಯತಿ ವ್ಯಾಪ್ತಿಯ ಹುಂಬ್ರಾಪಾನಿ ಗ್ರಾಮದ ಕಿರಿಯ ಪ್ರಾಥಮಿಕ ಶಾಲೆಗೆ, ಶೌಚಾಲಯ, ಕುಡಿಯುವ ನೀರು, ಪೀಠೋಪಕರಣ, ಮೈದಾನ, ಮೇಲ್ಛಾವಣಿ, ಅಡಿಗೆ ಕೋಣೆ, ಮುಂತಾದ ಯಾವ ವ್ಯವಸ್ಥೆಯು ಇಲ್ಲದೆ 25 ವಿದ್ಯಾರ್ಥಿಗಳು ವಿದ್ಯಾಭ್ಯಾಸ ಪಡೆಯುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಆದ್ಯತೆಯ ಮೇರೆಗೆ ಈ ಶಾಲೆಯ ಮತ್ತು ನೌಕರರುಗಳ ವ್ಯವಸ್ಥೆಗೆ ಸರ್ಕಾರ ತೆಗೆದುಕೊಳ್ಳುವ ತೀರ್ಮಾಣವೇನು?</td><td>ಹೌದು ಗಮನಕ್ಕೆ ಬಂದಿದೆ.
<ul>
<li>ಸರ್ಕಾರಿ ಕನ್ನಡ ಕಿರಿಯ ಪ್ರಾಥಮಿಕ ಉಮ್ರಾಪಾಣಿ ತಾ: ಖಾನಾಪೂರ ಶಾಲೆಯಲ್ಲಿ 2024-25ನೇ ಸಾಲಿನಲ್ಲಿ 25 ಮಕ್ಕಳು ವ್ಯಾಸಂಗ ಮಾಡುತ್ತಿದ್ದು, 2025-26ನೇ ಸಾಲಿನ ಕ್ರಿಯಾ ಯೋಜನೆಯಲ್ಲಿ ನರೇಗಾ ಯೋಜನೆಯಡಿ ತಾಲೂಕಾ ಪಂಚಾಯತ್ ಅನುದಾನದಲ್ಲಿ ಕುಡಿಯುವ ನೀರು ಪೂರೈಕೆಗಾಗಿ ಒಂದು ಕೊಳವೆ ಬಾವಿ ಕೊರೆಸಲು, ಶಾಲಾ ಆವರಣ ಗೋಡೆ ನಿರ್ಮಾಣ, ಆಟದ ಮೈದಾನ, ಹಾಗೂ</li>
</ul>
</td></tr>
</table>

| | | |
|---|---|---|
| | | ಶೌಚಾಲಯ ದುರಸ್ಥಿಯ ಕಾಮಗಾರಿಗಳನ್ನು ಅಳವಡಿಸಕೊಳ್ಳಲಾಗಿದೆ.<br>• 2025-26ನೇ ಸಾಲಿನಲ್ಲಿ ರಾಜ್ಯ ವಲಯದ ಯೋಜನೆಯಡಿ ಅನುದಾನ ಪಡೆದು ಪೀಠೋಪಕರಣ ಖರೀದಿಗೆ ಕ್ರಮವಹಿಸಲಾಗಿದೆ.<br>• ಸದರಿ ಶಾಲೆಗೆ 02 ಶಿಕ್ಷಕರನ್ನು ನಿಯೋಜನೆ ಮಾಡಿದ್ದು, ಕಾರ್ಯನಿರ್ವಹಿಸುತ್ತಿದ್ದಾರೆ.<br>• ಶಿಕ್ಷಕರ ನೇಮಕಾತಿ ಪ್ರಕ್ರಿಯೆ ಚಾಲನೆಯಲ್ಲಿದ್ದು, ಅಗತ್ಯ ಶಿಕ್ಷಕರನ್ನು ಒದಗಿಸಲು ನಿಯಮಾನುಸಾರ ಕ್ರಮವಹಿಸಲಾಗುವುದು.<br>**ಮಧ್ಯಾಹ್ನ ಉಪಹಾರ ಯೋಜನೆ:-** ಸರ್ಕಾರಿ ಕನ್ನಡ ಪ್ರಾಥಮಿಕ ಶಾಲೆ ಉಮ್ರಾಪಾನಿ ಖಾನಾಪುರ ತಾಲ್ಲೂಕು ಬೆಳಗಾವಿ ಜಿಲ್ಲೆ ಈ ಶಾಲೆಯಲ್ಲಿ ಮಕ್ಕಳ ದಾಖಲಾತಿ ಇಲ್ಲದ ಕಾರಣ 2023-24ನೇ ಸಾಲಿನಲ್ಲಿ ತಾತ್ಕಾಲಿಕವಾಗಿ ಮುಚ್ಚಲ್ಪಟ್ಟಿರುತ್ತದೆ.<br>2024-25ನೇ ಸಾಲಿನಲ್ಲಿ ಪುನರ್ ಪ್ರಾರಂಭವಾಗಿದ್ದು, ಈ ಶಾಲೆಯಲ್ಲಿ 25 ವಿದ್ಯಾರ್ಥಿಗಳು ದಾಖಲಾಗಿದ್ದು, ಈ ಶಾಲೆಯಲ್ಲಿ 03 ಕೊಠಡಿಯಿದ್ದು, 02 ಕೊಠಡಿಯಲ್ಲಿ ತರಗತಿಗಳು ನಡೆಯುತ್ತಿದೆ ಮತ್ತು 01 ಕೊಠಡಿಯಲ್ಲಿ ಬಿಸಿಯೂಟ ತಯಾರಿಸುತ್ತಿದ್ದು, ಈ ಶಾಲೆಯ ಅಡುಗೆ ಕೋಣೆ ದುರಸ್ಥಿಗೆ ಗ್ರಾಮ ಪಂಚಾಯತಿಗೆ ಮನವಿಯನ್ನು ಮಾಡಲಾಗಿರುತ್ತದೆ. |

**ಇಪಿ 233 ಯೋಸಕ 2025**

**(ಎಸ್.ಮಧುಬಂಗಾರಪ್ಪ)**
**ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವರು**

ಅನುಬಂಧ - 1

## ಅಪರ ಆಯುಕ್ತ ಕಛೇರಿ ಶಾಲಾ ಶಿಕ್ಷಣ ಇಲಾಖೆ ಧಾರವಾಡ

| 2022-23 ನೇ ಸಾಲಿನಲ್ಲಿ ರಾಜ್ಯ ವಲಯ ವಿವೇಕ ಯೋಜನೆಯಡಿ ಕೊಠಡಿ ನಿರ್ಮಾಣಕ್ಕೆ ಅನುದಾನ ಮಂಜೂರಾಗಿರುತ್ತದೆ. | | | | | |
|---|---|---|---|---|---|
| ಕ್ರ.ಸಂ | ತಾಲೂಕಿನ ಹೆಸರು | ಶಾಲೆಗಳ ಸಂಖ್ಯೆ | ಕೊಠಡಿಗಳ ಸಂಖ್ಯೆ | ಮಂಜೂರಾದ ಅನುದಾನ (ಲಕ್ಷ) | ಬಿಡುಗಡೆಯಾದ ಅನುದಾನ (ರೂ.ಲಕ್ಷಗಳಲ್ಲಿ) |
| 1 | ಕಾರವಾರ | 21 | 27 | 375.3 | 371.3 |
| 2 | ಅಂಕೋಲಾ | 18 | 25 | 347.5 | 343.5 |
| 3 | ಕುಮಟಾ | 26 | 27 | 377.8 | 373.2 |
| 4 | ಹೊನ್ನಾವರ | 26 | 31 | 435.9 | 431.3 |
| 5 | ಭಟ್ಕಳ | 14 | 17 | 236.3 | 232.11 |
| | ಒಟ್ಟು | 105 | 127 | 1772.8 | 1751.41 |

14/8/24

ಅಪರ ಆಯುಕ್ತರು
ಶಾಲಾ ಶಿಕ್ಷಣ ಇಲಾಖೆ,
ಧಾರವಾಡ

## ಪ್ರಶ್ನೆ ಸಂಖ್ಯೆ: 673 (762) (ಅ) ಗೆ ಸಂಬಂಧಿಸಿದ ಅನುಬಂಧ 'ಅ'

**2023–24 ನೇ ಸಾಲಿನಲ್ಲಿ ಪ್ರಕೃತಿ ವಿಕೋಪದಡಿ ಕೊಠಡಿ ದುರಸ್ತಿಗೆ ಮಂಜೂರಾದ ಅನುದಾನ**

| ಅ. ಸಂ | ತಾಲ್ಲೂಕಿನ ಹೆಸರು | ಶಾಲೆಗಳ ಸಂಖ್ಯೆ | ಕೊಠಡಿಗಳ ಸಂಖ್ಯೆ | ಮಂಜೂರಾದ ಅನುದಾನ (ಲಕ್ಷಗಳಲ್ಲಿ) | ಬಿಡುಗಡೆಯಾದ ಅನುದಾನ (ಲಕ್ಷಗಳಲ್ಲಿ) |
|---|---|---|---|---|---|
| 1 | ಕಾರವಾರ | 7 | 7 | 14 | 14 |
| 2 | ಅಂಕೋಲಾ | 9 | 9 | 19 | 19 |
| 3 | ಕುಮಟಾ | 12 | 12 | 23 | 23 |
| 4 | ಹೊನ್ನಾವರ | 7 | 7 | 11.5 | 11.5 |
| 5 | ಭಟ್ಕಳ | 10 | 10 | 19.25 | 19.25 |
| ಒಟ್ಟು | | 45 | 45 | 86.75 | 86.75 |

**ಈಗಾಗಲೆ 45 ದುರಸ್ತಿ ಕಾಮಗಾರಿಗಳು ಮುಕ್ತಾಯಗೊಂಡಿರುತ್ತವೆ**

**2024-25 ನೇ ಸಾಲಿನಲ್ಲಿ ರಾಜ್ಯ ವಲಯ ಯೋಜನೆಯಡಿ ಕೊಠಡಿ ದುರಸ್ಥಿಗೆ ಮಜೂರಾದ ಅನುದಾನ**

| ಅ. ಸಂ | ತಾಲ್ಲೂಕಿನ ಹೆಸರು | ಶಾಲೆಗಳ ಸಂಖ್ಯೆ | ಕೊಠಡಿಗಳ ಸಂಖ್ಯೆ | ಮಂಜೂರಾದ ಅನುದಾನ (ಲಕ್ಷಗಳಲ್ಲಿ) | ಬಿಡುಗಡೆಯಾದ ಅನುದಾನ (ಲಕ್ಷಗಳಲ್ಲಿ) |
|---|---|---|---|---|---|
| 1 | ಕಾರವಾರ | 27 | 53 | 42.13 | 42.13 |
| 2 | ಅಂಕೋಲಾ | 30 | 51 | 47.32 | 47.32 |
| 3 | ಕುಮಟಾ | 66 | 83 | 105.11 | 105.11 |
| 4 | ಹೊನ್ನಾವರ | 50 | 89 | 75.88 | 73.88 |
| 5 | ಭಟ್ಕಳ | 16 | 25 | 40.38 | 40.38 |
| | ಒಟ್ಟು | 189 | 301 | 310.82 | 308.82 |

**ಈಗಾಗಲೆ 104 ದುರಸ್ತಿ ಕಾಮಗಾರಿಗಳು ಮುಕ್ತಾಯಗೊಂಡಿರುತ್ತವೆ 85 ಪ್ರಗತಿಯಲ್ಲಿವೆ**

**2024–25 ನೇ ಸಾಲಿನಲ್ಲಿ ಪ್ರಕೃತಿ ವಿಕೋಪದಡಿ ಕೊಠಡಿ ದುರಸ್ಥಿಗೆ ಮಂಜೂರಾದ ಅನುದಾನ**

| ಅ. ಸಂ | ತಾಲ್ಲೂಕಿನ ಹೆಸರು | ಶಾಲೆಗಳ ಸಂಖ್ಯೆ | ಕೊಠಡಿಗಳ ಸಂಖ್ಯೆ | ಮಂಜೂರಾದ ಅನುದಾನ | ಬಿಡುಗಡೆಯಾದ ಅನುದಾನ |
|---|---|---|---|---|---|
| 1 | ಕಾರವಾರ | 4 | 4 | 8 | 8 |
| 2 | ಅಂಕೋಲಾ | 3 | 3 | 6 | 6 |
| 3 | ಕುಮಟಾ | 6 | 6 | 11.3 | 11.3 |
| 4 | ಹೊನ್ನಾವರ | 11 | 11 | 21.5 | 21.5 |
| 5 | ಭಟ್ಕಳ | 11 | 11 | 22 | 21.5 |
| | ಒಟ್ಟು | 35 | 35 | 68.8 | 68.3 |

**ಈಗಾಗಲೆ 35 ದುರಸ್ತಿ ಕಾಮಗಾರಿಗಳು ಮುಕ್ತಾಯಗೊಂಡಿರುತ್ತವ**

14/8/25

**ಅಪರ ಆಯುಕ್ತರು**
**ಶಾಲಾ ಶಿಕ್ಷಣ ಇಲಾಖೆ, ಧಾರವಾಡ**

| Annexure | | | | | | | |
|---|---|---|---|---|---|---|---|
| Slo. No | District | Apporval Year | Constituency | Name of the School | Nature of the work | Approved amount | Released amount |
| 1 | Uttara Kannada | 2023-24 | BHATKAL | KARNATAKA PUBLIC SCHOOLS GMHPS TERNAMAKKI | Drinking Water | 2.00 | 2.00 |
| 2 | Uttara Kannada | 2023-24 | HONNAVAR | M H P S HALADIPUR | Drinking Water | 2.00 | 2.00 |
| | Total | | | | | 4.00 | 4.00 |
| 1 | Uttara Kannada | 2024-25 | Bhatkal | KARNATAKA PUBLIC SCHOOLS GMHPS TERNAMAKKI AND UPGRADED RMSA SCHOOL | Construction of Workshop/Laboratory cum Classroom | 28.90 | 21.68 |
| 2 | Uttara Kannada | 2024-25 | Honnavara | M H P S HALADIPUR | Additional Classrooms | 17.70 | 13.28 |
| 3 | Uttara Kannada | 2024-25 | Bhatkal | KARNATAKA PUBLIC SCHOOLS GMHPS TERNAMAKKI AND UPGRADED RMSA SCHOOL | Additional Classrooms | 17.70 | 13.28 |
| 4 | Uttara Kannada | 2024-25 | Kumata | GMHPS KUJALLI | Construction of Library for elementary schools | 17.70 | 13.28 |
| 5 | Uttara Kannada | 2024-25 | Bhatkal | GHPS ALVEKODI | Construction of Library for elementary schools | 17.70 | 13.28 |
| 6 | Uttara Kannada | 2024-25 | Bhatkal | GHPS JALI | Construction of Library for elementary schools | 17.70 | 13.28 |
| | Total | | | | | 117.40 | 88.06 |
| | Grand Total | | | | | 121.40 | 92.06 |

State Project Engineer
Samagra Shikshana Karnataka
Bengaluru-01